ಮುಖ್ಯಮಂತ್ರಿಗಳ ಶಿವಮೊಗ್ಗ ಜಿಲ್ಲೆಯ ಪ್ರವಾಸ ಸಮಯದಲ್ಲಿ ಶಾಲಾ ಮಕ್ಕಳನ್ನು ಬಳಸಿಕೊಳ್ಳವ ಸಲುವಾಗಿ ಶಿವಮೊಗ್ಗ ಡಿ.ಡಿ.ಪಿ. ರವರು ಸುತ್ತೋಲೆ ಕಳುಹಿಸಿರುವ ಬಗ್ಗೆ

(300) - ಶ್ರೀ ಡಿ. ಬಿ. ಚಂದ್ರೇಗೌಡ, (ತೀರ್ಥಹಳ್ಳಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮುಖ್ಯ ಮಂತ್ರಿಗಳ ಶಿವಮೊಗ್ಗ ಜಿಲ್ಲೆಯ ಪ್ರವಾಸ ಸಮಯದಲ್ಲಿ ಶಾಲಾ ಮಕ್ಕಳನ್ನು ಬಳಸಿಕೊಳ್ಳುವ ಸಲುವಾಗಿ ಶಿವಮೊಗ್ಗ ಡಿ.ಡಿ.ಪಿ.ಐ. ರವರು ಜಿಲ್ಲೆಯ ಶಾಲೆಗಳಿಗೆ ಸುತ್ತೋಲೆಯನ್ನು ಹೊರಡಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ದಿನಾಂಕ 4-2-91ರಂದು ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗ ನಗರದ ಮುಖ್ಯ ಬೀದಿಗಳಲ್ಲಿ ಹಾದು ಹೋಗುವಾಗ ಅವರನ್ನು ಮಕ್ಕಳು ನೋಡಲು ಅನುಕೂಲವಾಗುವಂತೆ ಹಾಗೂ ಅವರಿಗೆ ಸ್ವಾಗತ ಕೋರುವ ಬಗ್ಗೆ ಶಾಲೆಯ ಹತ್ತಿರದ ಪ್ರದೇಶದಲ್ಲಿ ನಿಲ್ಲುವಂತೆ ಮಾತ್ರ ಸೂಚನೆಯನ್ನು ಜಿಲ್ಲಾ ಉಪನಿರ್ದೇಶಕರು ನೀಡಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕಪ್ಪು ಹಲಗೆ ಯೋಜನೆ

(720) - ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಪ್ಪು ಹಲಗೆ ಯೋಜನೆಯಡಿ 1990-91ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಾಗಿ ಸರ್ಕಾರ ಸದನಕ್ಕೆ ಭರವಸೆಯನ್ನು ಕೊಟ್ಟಿರುವುದು ನಿಜವೇ?

ಆ) ಈ ಬಗೆಗಿನ ನೇಮಕಾತಿ ಇನ್ನೂ ಆಗಿಲ್ಲದಿರಲು ಕಾರಣವೇನು?

ಇ) ಎಷ್ಟು ಅವಧಿಯೊಳಗೆ ನೇಮಕಾತಿ ಪೂರೈಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

ಅ) ಹೌದು

ಆ) ಕಪ್ಪು ಹಲಗೆ ಯೋಜನೆಯಡಿ ಮೊದಲನೆ ಹಂತ ಮತ್ತು ಎರಡನೇ ಹಂತ ಕ್ರಮವಾಗಿ 1987-88 1988-89) ರಲ್ಲಿ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 1989-90ನೇ ಸಾಲಿನ ಮೂರನೇ ಹಂತದ ಶಿಕ್ಷಕರ ಹುದ್ದೆಗಳು 1990 ರ ಜೂನ್ ಮಾಹೆಯಲ್ಲಿ ಮಾಂಜೂರಾಗಿರುವ ಪ್ರಯುಕ್ತ ತುಂಬಲಾಗಿಲ್ಲ.

ಇ) ಶೀಘ್ರದಲ್ಲಿಯೇ ತುಂಬುಲು ಕ್ರಮ ಕೈಗೊಳ್ಳಲಾಗುವುದು.

ರಸ್ತೆ ಸಾರಿಗೆ ಬಸ್ ನಿಲ್ದಾಣದ ಬಗ್ಗೆ

(713) - ಶ್ರೀ ಅಂಜನ ಮೂರ್ತಿ (ನೆಲಮಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನ್‌ನಲ್ಲಿ ರಸ್ತೆ ಸಾರಿಗೆ ಬಸ್ ನಿಲ್ದಾಣವು ಬಹಳ ಚಿಕ್ಕದಾಗಿದ್ದು ಬಸ್ಸುಗಳ ನಿಲುಗಡೆಗೆ ಸಾರ್ವಜನಿಕರು ನಿಲುಗಡೆಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಒಂದು ವಿಸ್ತಾರವಾದ ಬಸ್ಸು ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ?